ಓ.ಎಸ್ಃ **/2017**

ಪಿ. ಡಬ್ಲ್ಯೂ ಃ 02

**<u>ಸಾಕ್ಷಿಗೆ ದಿನಾಂಕ 28.10.2019 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಮುಂದುವರೆದ ಪಾಟೀಸವಾಲು ಃ ವಾದಿ ಪರ ಶ್ರೀ/ಶ್ರೀಮತಿ ವಕೀಲರಿಂದ</u>**

ನನಗೆ ವಿಶ್ವನಾಥ್ ಎಂಬ ಗಂಡು ಮಗ ಇದ್ದಾನೆ ಎಂದರೆ ಸರಿ . ನನ್ನ ಗಂಡ ತೀರಿಕೊಂಡ ನಂತರ ನಮ್ಮ ಕುಟುಬದ ವ್ಯವಹಾರವನ್ನು ನನ್ನ ಮಗ ನೋಡಿಕೊಳ್ಳುತ್ತಾನೆ ಎಂದರೆ ಸರಿಯಲ್ಲ. ನನ್ನ ಗಂಡ ತೀರಿಕೂಂಡ ನಂತರ ಪ್ರಸುತ್ತ ಹಣದ ವ್ಯವಹಾರ ಬಿಟ್ಟು ಬೇರೆ ಯಾವುದೇ ವ್ಯವಹಾರ ಮಾಡಿಲ್ಲ. ಪ್ರತಿವಾದಿಯು ಲಕ್ಷಕ್ಕೆ 2 ಸಾವಿರ ಬಡ್ಡಿಯನ್ನು ನೀಡುತ್ತೇನೆ ಎಂದು ಒಪ್ಪಿಕೊಂಡಿದ್ದರು. ಆತ ನನಗೆ ಯಾವುದೇ ಬಡ್ಡಿಯನ್ನು ನೀಡಿಲ್ಲ. ನಿಪಿ 1ನ್ನು ಬರೆಯುವ ಸಮಯದಲ್ಲಿ ಆತ ಬಡ್ಡಿಯನ್ನು ನೀಡುತ್ತೇನೆ ಎಂದು ಒಪ್ಪಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ 3 ರಲ್ಲಿ ನೀಡಿದ 15 ದಿನಗಳೊಳಗಾಗಿ ನಾವು ಪ್ರತಿವಾದಿಯ ವಿರುದ್ದ ಯಾವುದೇ ದಾವೆಯನ್ನು ಹೂಡಿಲ್ಲ ಎಂದರೆ ಸರಿಯಲ್ಲ. ನಿಪಿ 3ಕ್ಕೆ ಪ್ರತಿವಾದಿಯು ಪ್ರತ್ಯುತ್ತರ ನೀಡಿರಿದ್ದಾರೆ ಎಂದರೆ ಸರಿ ಸಾಕ್ಷಿಯು ಮುಂದುವೆರೆದು ಸುಳ್ಳು ಪ್ರತ್ಯುತ್ತರ ನೀಡಿದ್ದಾರೆ ಎಂದು ಲನುಡಿಯುತ್ತಾರೆ. ಪ್ರತಿವಾದಿಯು ನಿಪಿ 4ರಲ್ಲಿ ನನ್ನ ಯಜಮಾನರಿಂದ 1 ಲಕ್ಷ ಸಾಲ ಪಡೆದುಕೊಂಡಿದ್ದಾರೆ ಎಂದರೆ ಸುಳ್ಳು . ಸದರಿ ಹಣಕ್ಕೆ ಶೇ. 3 ರಂತೆ ಬಡ್ಡಿಯನ್ನು ಕಟ್ಟುತ್ತಿದ್ದೇನೆ ಎಂದು ಹೇಳಿದ್ದೆನೆ ಎಂದರೆ ಸುಳ್ಳು. ನನ್ನ ಗಂಡ ಸದರಿ ಬಡ್ಡಿಯನ್ನು ಒಂದುಪುಸ್ತಕದಲ್ಲಿ ನಮೂದುಮಾಡಿ ಇಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಗಂಡ ತಾನು ಸಾಯುವವರೆಗೂ ಶೇ. 3 ಬಡ್ಡಿಯನ್ನು

ಪಡೆದುಕೂಂಡಿದ್ದರು ಎಂದರೆ ಸರಿ ಯಲ್ಲ. ನನ್ನ ಗಂಡನ ಮರಣದ ನಂತರ ನನ್ನ ಮಗ ಬಡ್ಡಿಯನ್ನು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ಮಗ ಕೂಡ ಬಡ್ಡಿ ಪಡೆದ ನಂತರ ಪುಸ್ತಕದಲ್ಲಿ ಬರೆದುಕೊಳ್ಳುತ್ತಿದ್ದರುಎಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಂಡ ನಂತರ ಪ್ರತಿವಾದಿಯು ಯಾವುದೇ ಹಣವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

ನನ್ನ ಗಂಡ ತೀರಿಕೊಂಡ ನಂತರ ನನ್ನ ಮಗ ಪ್ರತಿವಾದಿಗೆ ಬಡ್ಡಿ ನೀಡುವಂತೆ ಕಿರುಕುಳ ಕೊಟ್ಟಾಗ ಸಹಾಯಕ ನಿರ್ದೇಶಕರು ಪಾಂಡವಪುರ ದಲ್ಲಿ ದೂರನ್ನು ದಾಖಲಿಸಿದ್ದರು ಎಂದರೆ ಸರಿಯಲ್ಲ. ದಿ. 19.12.2016 ರಂದು ನಾನು ಸಹಕಾರ ಸಂಘದ ಸಹಾಯಕ ನಿಭಂದಕರ ಬಳಿ ಹಾಜರಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿ. 28.11.2016 ಮತ್ತು 10.07.2017 ರಂದು ವಿಚಾರಣೆಗೆ ಹಾಜರಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿ . ದಿ. 27.12.2016 ರಂದು ನನ್ನ ಮಗನಿಗೆ ಎದುರುದಾರರು 1 ಸಾವಿರ ಬಡ್ಡಿಯನ್ನು ನೀಡಿರತ್ತಾರೆ ಎಂದರೆ ಸರಿಯಲ್ಲ. ದಿ. 29.12.2016 ರಂದು ರೂ . 1 ಸಾವಿರದ 50 ನ್ನು ಎದುರುದಾರರು ನನ್ನ ಮಗನಿಗೆ ಕಳಹಿಸಿಕೊಟ್ಟಿರುತ್ತೆರೆ ಎಂದರೆ ಸಸರಿಯಲ್ಲ. ಅದೇ ರೀತಿ ದಿ. 21.01.2017 ರಂದು ರೂ . 1 ಸಾವಿರವನ್ನು ಎದುರುದಾರರು ನನ್ನ ಮಗನಿಗೆ ಕಳಹಿಸಿಕೊಟ್ಟಿರುತ್ತೆರೆ ಎಂದರೆ ಸರಿಯಲ್ಲ. ಅದೇ ರೀತಿ ನನಗೂ ಕೂಡ ಪ್ರತಿವಾದಿ 24.04.2017, 28.06.2017, 26.07.2017, 29.08.2017 ರಂದು ನನಗೆ ಮನಿ ಆರ್ಡರ್ ಮೂಲಕ 1 ಸಾವಿರ 50 ಹಣವನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ವಿರುದ್ದ ಸುಳ್ಳು ದಾವೆಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ದಿ.27.10.2014 ರಿಂದ ನನಗೆ 70 ಸಾವಿರ ಬಡ್ಡಿ ಬೆರಬೇಕು ಎಂದು ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ

ಸರಿಯಲ್ಲ.  ನಮ್ಮ ಕುಟುಂಬದವರೆಲ್ಲರೂ ಬಡ್ಡಿ ವ್ಯವಹಾರ ಮಾಡುತ್ತೇವೆ ಎಂದರೆ ಸರಿಯಲ್ಲ.

ನನ್ನ ಗಂಡ ತೀರಿಕೊಂಡ ನಂತರ ನನ್ನ ಮಗ ಬಡ್ಡಿಯನ್ನು ಚೆಕ್ ಮುಖಾಂತರ ಪಡೆಯುತ್ತಿದ್ದರುಎಂದರೆ ಸರಿಯಲ್ಲ .  ಶೇ3 ರಂತೆ ಬಡ್ಡಿ ಪಡೆಯುತ್ತಿದ್ದರು ಎಂದರೆ ಸರಿಯಲ್ಲ.

ಪಾಟೀ ಸವಾಲಿಗಾಗಿ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ